# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89 ಹೊಸ ವಾರ್ಡ್ ಸಂಖ್ಯೆ 179 ಜೋಗುಪಾಳ್ಯ ವಾರ್ಡಿನ ದಿನಾಂಕ: 15-10-2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21/21-09-2020 ರ ಆದೇಶದಂತೆ ದಿನಾಂಕ: 15-10-2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಿಬಿಎಂಪಿ **ಸಂಪರ್ಕ ಕೇಂದ್ರ, 1ನೇ ಮಹಡಿ, ಗುಂಡಪ್ಪ ಪಾರ್ಕ್ ಪಕ್ಕ ಜೋಗುಪಾಳ್ಯ, ಬೆಂಗಳೂರು-8** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ.ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು BESCOM ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ ರಮೇಶ್ ರೆಡ್ಡಿ, ಶ್ರೀ, ಹೇಮಂತ್ ನಾಗ್, ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಗಣೇಶ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಸಭೆಯಲ್ಲಿ ವಾರ್ಡಿನ ನಾಗರಿಕರಾದ ಶ್ರೀ ಮುನಿರಾಜು ರವರು ಮಾತನಾಡುತ್ತಾ ಕಂದಾಯ ವಿಭಾಗದವರು ಮತದಾನದ ಗುರುತ್ತಿನ ಚೀಟಿ ಜೊತೆ ಆಧಾರ್ ಜೋಡನೆಯ ಬಗ್ಗೆ ವಿವರವಾಗಿ ತಿಳಿಸಬೇಕೆಂದು ಹಾಗೂ ಮತದಾರರ ಪಟ್ಟಿಯಲ್ಲಿ ಹೊಸದಾಗಿ ನೊಂದಣಿ ಮಾಡಿಸುವುದು ಹಾಗೂ ಅಳಿಸುವಿಕೆಯ ಬಗ್ಗೆಯು ಯಾವ ಆಧಾರದ ಮೇಲೆ ಮಾಡುವಿರೆಂದು ಕೇಳಿರುತ್ತಾರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಗುರುತ್ತಿನ ಚೀಟಿ ಜೋತೆ ಆಧಾರ್ ಜೋಡನೆಯ ಬಗ್ಗೆ ವಾರ್ಡಿನ ಸಮಿತಿ ಸದಸ್ಯರು ವಾರ್ಡಿನಲ್ಲಿ ಪ್ರಚಾರ ಪಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನೋಡಲ್ ಅಧಿಕಾರಿರವರು ಕೋರಿದರು.
   ಕ್ರಮ :- ಸಹ ಕಂದಾಯ ಅಧಿಕಾರಿ ರವರು ಕ್ರಮ ವಹಿಸುವುದು.

2) ವಾರ್ಡಿನಲ್ಲಿರುವ ಮರಗಳ ಕೊಂಬೆಗಳು ರಸ್ತೆಯಲ್ಲಿ ಅಡ್ಡಲಾಗಿ ಇರುವುದನ್ನು ತುರ್ತಾಗಿ ತೆರವುಗೊಳಿಸುವುದು.- ಅರಣ್ಯ ಇಲಾಖೆ ಬಿಬಿಎಂಪಿ ಕ್ರಮವಹಿಸುವುದು.

3) ನಂದವನಂ ಜೀ ಮುಖ್ಯ ರಸ್ತೆ 10ನೇ ಬೀದಿ 1ನೇ ಕ್ರಾಸ್ ಕ್ರೈಂ ಬ್ರಿಡ್ಜ್ ಗಣೇಶ ದೇವಸ್ಥಾನದ ಹತ್ತಿರ ಮಳೆಯ ನೀರು ಸರಾಗವಾಗಿ ಹೋಗಲು ಕೂಡಲೆ ಚರಂಡಿಯಲ್ಲಿ ಹುಳೆತ್ತುವ ಕಾರ್ಯವನ್ನು ಪ್ರಾರಂಭಿಸಬೇಕೆಂದು ಕೇಳಲಾಗಿದೆ.-ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿ ವಿಭಾಗ ಬಿಬಿಎಂಪಿ ಕ್ರಮವಹಿಸುವುದು.

4) ವಾರ್ಡಿನಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಚರ್ಚಿಸಲಾಗಿ ಕೂಡಲೆ ಬಿಬಿಎಂಪಿ ವಿದ್ಯುತ್ ವಿಭಾಗದವರು ಅಳವಡಿಸಬೇಕೆಂದು ಕೇಳಲಾಗಿದೆ-ವಿದ್ಯುತ್ ವಿಭಾಗ ಕ್ರಮವಹಿಸುವುದು.

5) ವಾರ್ಡಿನಲ್ಲಿ ಮುಖ್ಯ ಚಾನಲ್ ರಸ್ತೆ ಈಶ್ವರ್ ಲೇಔಟ್ ಹಾಗೂ ಇನ್ನಿತರ ಸ್ಥಳಗಳಲ್ಲಿ ಅಪರಾಧದ ಸಂಖ್ಯೆಗಳು ಹೆಚ್ಚುತ್ತಿದ್ದು ಅರಕ್ಷಕ ವಿಭಾಗದವರು ಕ್ರಮವಹಿಸಬೇಕೆಂದು ಸಮಿತಿ ಸಭೆಯಲ್ಲಿ ಇಂದಿರಾನಗರ ಅರಕ್ಷಕ ಠಣೆಯಿಂದ ಶರತ್ ಸಬ್ ಇನ್ಸಪೆಕ್ಟರ್ ಹಾಜರಾಗಿದ್ದು ಇವರಿಗೆ ಕ್ರಮವಹಿಸಲು ಕೋರಲಾಗಿದೆ. ಹಾಗೂ ಮುಖ್ಯ ಚಾನಲ್ ರಸ್ತೆಯ ಎರಡು ಬದಿಯಲ್ಲಿ ವಾಹನಗಳು ನಿಲುಗಡೆಯಾಗುತ್ತಿದ್ದು ಇದರಿಂದ ವಾಹನಗಳು ಸಾರಗವಾಗಿ ಓಡಾಡಲು ಸಮಸ್ಯೆಯಾಗುತ್ತಿದ್ದು ಅರಕ್ಷಕ ವಿಭಾಗದವರು ಕ್ರಮ ತೆಗೆದುಕೊಳ್ಳಬೇಕೆಂದು ಕೋರಲಾಗಿದೆ.

6) ಕ್ರೈಂಬ್ರೀಡ್ಜ ರಸ್ತೆಯ ಸಯಿಬಾಬ ದೇವಸ್ಥಾನದ ರಸ್ತೆಯಲ್ಲಿ ವಿಪರಿತವಾದ ತಲ್ಲುವ ಗಾಡಿಗಲದ್ದು ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಕೂಡಲೆ ಹೆಚ್ಚುವರಿಯಾಗಿರುವ ತಲ್ಲುವ ಗಾಡಿಗಳನ್ನು ತೆರವುಗಿಳಸುವ ಬಗ್ಗೆ ಚರ್ಚಿಸಲಾಗಿದೆ- ಆರೋಗ್ಯ ಅಭಿಯಂತರ ಹಾಗೂ ಅರಕ್ಷಕ ವಿಭಾಗದವರು ಕ್ರಮವಹಿಸುವುದು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ. ಸಭೆಯನ್ನು ಮುಕ್ತಾಯಗೊಳಸಿದರು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ